## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಮತ್ತು ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಏಕರೂಪದ ಊಟತಿಂಡಿ ಒದಗಿಸಲು ಮೆನು ಚಾರ್ಟ್ ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಕಇ 123 ಸಮನ್ವಯ 2008, ದಿನಾಂಕ: 26-05-20102.

2) ಸರ್ಕಾರದ ಆದೇಶ ಸಂಖ್ಯೆ:ಸಕಇ 79 ಸಮನ್ವಯ 2010, ದಿನಾಂಕ 25.05.2010

3) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪ್ರಸ್ತಾವನೆ ಸಂಖ್ಯೆ:ಕವಶಿಸಸ/ಸಿಆರ್(ಶಿ) 19/2010-11

*************

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ/ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರ್ ಕರೆದು ದರಗಳನ್ನು ಮತ್ತು ಗುಣಮಟ್ಟವನ್ನು ನಿರ್ಣಯಿಸಿ ಸರಬರಾಜು ಮಾಡಲು ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಸಮಾಜ ಕಲ್ಯಾಣ ಸಚಿವಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ ಭೋಜನಾ ವೆಚ್ಚ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಪ್ರಸ್ತಾವನೆ ಸಲ್ಲಿಸಿ ಓದಲಾದ (1) ರ ಆದೇಶದ ಅನುಬಂಧ-2 ರಲ್ಲಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳು, ದಕ್ಷಿಣ ಕರ್ನಾಟಕ ಜಿಲ್ಲೆಗಳ ಬಯಲು ಸೀಮೆ ಪ್ರದೇಶಗಳು ಮತ್ತು ಉತ್ತರ ಕರ್ನಾಟಕ ಜಿಲ್ಲೆಗಳಿಗೆ ನಿಗಧಿಪಡಿಸಿರುವ ಮೆನುಚಾರ್ಟ್‌ನಲ್ಲಿ ಚಪಾತಿ ಊಟವನ್ನು ನಿಗಧಿಪಡಿಸಿರುವುದಿಲ್ಲ ಪ್ರತಿ ವಿದ್ಯಾರ್ಥಿಗೆ 5 ಕೆ.ಜಿ. ಗೋಧಿ ಸಬ್ಸಿಡಿ ದರದಲ್ಲಿ ಸಿಗುತ್ತಿದ್ದು, ಇತರ ಅಕ್ಕಿ ಮತ್ತು ರಾಗಿಗಿಂತ ಗೋಧಿಯು ಹೆಚ್ಚು ಪೌಷ್ಟಿಕಾಂಶವುಳ್ಳ ಪದಾರ್ಥವಾಗಿರುವುದರಿಂದ ದಿನಕ್ಕೆ ಒಂದು ಬಾರಿ ಅಥವಾ ಎರಡುದಿನಕ್ಕೊಂದು ಬಾರಿಯಾದರೂ ಮಧ್ಯಾಹ್ನ ಅಥವಾ ರಾತ್ರಿ ಊಟಕ್ಕೆ ಚಪಾತಿ ವಸತಿ ಶಾಲೆಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ನೀಡುವುದು ಅವಶ್ಯವೆಂದು ತಿಳಿದು ಅದಕ್ಕೆ ಬೇಕಾದ ಅಗತ್ಯ ಮಾಹಿತಿಗಳನ್ನು ಒದಗಿಸಿದ್ದಾರೆ. ಪ್ರಸ್ತಾವನೆಯಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಊಟದ ವೆಚ್ಚ ಮಾಹೆಯಾನ ರೂ.650/- ರಿಂದ 750/-ಕ್ಕೆ ಹೆಚ್ಚಿಸಿದ್ದು, ನಿಗಧಿಪಡಿಸಿರುವ ವೆಚ್ಚದಲ್ಲೇ ಉತ್ತಮ ಗುಣಮಟ್ಟದ ಆಹಾರ ಒದಗಿಸಲು ಅನುಬಂಧದಲ್ಲಿ

...2

2017/11

ನೀಡಲಾದ ಮೆನುಚಾರ್ಟ್‌ನಲ್ಲಿ ಆಯಾಯ ಪ್ರದೇಶಕ್ಕೆ ಅನುಸಾರವಾಗಿ ಊಟ ತಿಂಡಿಯ ಪಟ್ಟಿ ತಯಾರಿಸಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಸ್ತಾವನೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 85 ಮೊದೇಶಾ 2010, ಬೆಂಗಳೂರು, ದಿನಾಂಕ:15.07.2010**

ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಮತ್ತು ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ 2010-11ನೇ ಸಾಲಿನಿಂದ ಜಾರಿಗೆ ಬರುವಂತೆ ಏಕರೂಪದ ಮೆನುಚಾರ್ಟ್ ನಿಗಧಿಪಡಿಸಿದಂತೆ ಆದೇಶಕ್ಕೆ ಲಗತ್ತುಪಡಿಸಿದ ಅನುಬಂಧಗಳಲ್ಲಿನ ವಿವರಗಳಂತೆ ನಿಗಧಿಪಡಿಸಿದೆ. ಅನುಬಂಧ-1 ರಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿನಿತ್ಯ ನೀಡಬೇಕಾದ ಆಹಾರ ಪದಾರ್ಥಗಳ ಪರಿಮಾಣ, ಅನುಬಂಧ-2 ರಲ್ಲಿ ಕರಾವಳಿ ಪ್ರದೇಶ, ಅನುಬಂಧ-3 ರಲ್ಲಿ ಮಲೆನಾಡು ಮತ್ತು ದಕ್ಷಿಣಕರ್ನಾಟಕ ಮತ್ತು ಅನುಬಂಧ-4 ರಲ್ಲಿ ಉತ್ತರಕರ್ನಾಟಕ ಪ್ರದೇಶಗಳಲ್ಲಿರುವ ಆಹಾರ ಪದ್ಧತಿ ಅನುಸರಿಸಿ ನೀಡುವುದು.

ಮೆನು ಚಾರ್ಟ್‌ನಲ್ಲಿ ನಿಗಧಿಪಡಿಸಿದ ಆಹಾರದಲ್ಲಿ ಅಗತ್ಯವಿದ್ದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಪ್ರತಿನಿತ್ಯ ಊಟತಿಂಡಿ ವಿದ್ಯಾರ್ಥಿಗಳಿಗೆ ನೀಡಲು ಜಿಲ್ಲಾ ಮಟ್ಟದ ಅಧಿಕಾರಿಗಳು ಕ್ರಮವಹಿಸಲು ಆದೇಶಿಸಿದೆ. ಮೆನು ಚಾರ್ಟ್ ಪ್ರಕಾರ ಊಟತಿಂಡಿ ನೀಡುವುದರಲ್ಲಿ ವ್ಯತ್ಯಯಾದಲ್ಲಿ ಇದಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹೊಣೆಗಾರರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
4. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
6. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಮುಖಾಂತರ.
7. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ದಿನ ಒಂದಕ್ಕೆ ಪ್ರತಿ ವಿದ್ಯಾರ್ಥಿಗೆ ನಿಗಧಿಪಡಿಸಿದ ಆಹಾರ
ಪದಾರ್ಥಗಳ ವಿವರ.

| ಕ್ರ. ಸಂ. | ಪ್ರತಿ ವಿದ್ಯಾರ್ಥಿಗೆ ನೀಡಬೇಕಾದ ಪದಾರ್ಥಗಳ ವಿವರ | ಪರಿಮಾಣ (ಗ್ರಾಂ ಗಳಲ್ಲಿ) | ದರ (ರೂ.ಗಳಲ್ಲಿ) | ದಿನಕ್ಕೆ ತಗಲುವ ವೆಚ್ಚ (ರೂ.ಗಳಲ್ಲಿ) |
|---|---|---|---|---|
| 1 | ಅಕ್ಕಿ (ನಿಯಂತ್ರಿತ) | 300 | 5.90 | 1.77 |
| 2 | ಗೋದಿ (ನಿಯಂತ್ರಿತ) | 150 | 5.34 | 0.80 |
| 3 | ಸಾಗಾಣಿಕೆ (ನಿಯಂತ್ರಿತ ಅಕ್ಕಿ ಗೋದಿ) | | | 0.30 |
| 4 | ರಾಗಿ (ಮುಕ್ತ ಮಾರುಕಟ್ಟೆಯಲ್ಲಿ)/ಜೋಳ | 100 | 13.00 | 1.30 |
| 5 | ರವೆ | 32 | 26.00 | 0.78 |
| 6 | ಅವಲಕ್ಕಿ | 35 | 30.00 | 1.00 |
| 7 | ಬೇಳೆ (ತೊಗರಿ)/ಕಾಳುಗಳು | 20 | 80.00 | 1.60 |
| 8 | ತರಕಾರಿ/ ಈರುಳ್ಳಿ, ಹಸಿ ಮೆಣಸಿನಕಾಯಿ, ಇತರ ಕಾಯಿಪಲ್ಯೆಗಳು | 200 | 20.00 | 3.87 |
| 9 | ಎಣ್ಣೆ | 10 | 60.00 | 0.60 |
| 10 | ಸಕ್ಕರೆ | 10 | 42.00 | 0.42 |
| 11 | ಉಪ್ಪು | 10 | 7.00 | 0.07 |
| 12 | ಹಾಲು (ನಂದಿನಿ) | 100 M.L | 19.00 | 1.90 |
| 13 | ಹುಣಸೇಹಣ್ಣು | 5 ಗ್ರಾಂ | 60.00 | 0.30 |
| 14 | ಮಸಾಲೆ ಪುಡಿ | 10 ಗ್ರಾಂ | 120.00 | 1.20 |
| 15 | ತೆಂಗಿನಕಾಯಿ | 5 | 8.00 | 0.04 |
| 16 | ಉದ್ದಿನಬೇಳೆ/ ಚಕ್ಕೆಲವಂಗ/ ಕಡಲೇ ಬೀಜ/ ಕಡ್ಲೆಬೇಳೆ, ಸಾಸಿವೆ, ಬಟಾಣಿ/ ತುಪ್ಪ/ ಜಾಮೂನ್ ಪ್ಯಾಕೇಟ್ ಇತರೆ ಅಡುಗೆ ಪದಾರ್ಥಗಳು/ ಕಡ್ಲೆಹಿಟ್ಟು/ ಮಂಡಕ್ಕಿ/ ಇತರೆ ಸಿಹಿತಿಂಡಿ ತಯಾರಿಕಾ ಸಾಮಗ್ರಿಗಳು. | | | 1.11 |
| 17 | ಕಾಳುಗಳು, ಹೆಸರು ಕಾಳು/ ಕಡ್ಲೆಕಾಳು, ಉಸಲಿಗೆ | 15 ಗ್ರಾಂ | 80.00 | 1.20 |
| 18 | ಕಾಫಿ/ಟೀ ಪುಡಿ | 2 ಗ್ರಾಂ | 140.00 | 0.28 |
| 19 | ಮೊಟ್ಟೆ ವಾರಕ್ಕೆ 2 ದಿನ | 8 ನಂ. | 16.00 | 0.53 |
| 20 | ಬಾಳೆಹಣ್ಣು/ ವಾರಕ್ಕೆ 4 ದಿನಗಳು | 16 ನಂ. | 32.00 | 1.00 |
| 21 | ಅಡುಗೆ ಅನಿಲ ಸಾಗಾಣಿಕೆ ಸೇರಿ. | 40 ನಂ. ತಿಂಗಳಿಗೆ | 355.00<br>20.00 | 1.93 |
| 22 | ಮಾಂಸಹಾರಿಗಳಿಗೆ ವಾರದಲ್ಲಿ ಒಂದು ದಿನ ಕೋಳಿ ಮಾಂಸ/ ಎರಡು ದಿನ ಮೀನು ಊಟ, ಸಸ್ಯಹಾರಿಗಳಿಗೆ ಸಿಹಿ ಊಟ. | | 90.00<br>60.00 | 3.00 |
| | ಒಟ್ಟು | | | 25.00 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
(ಎಂ.ಎಂ.ಬಾಪೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ

ಅನುಬಂಧ-2

ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ನಿಲಯಗಳಲ್ಲಿ ಊಟದ ದರ ಹೆಚ್ಚಳದಿಂದ ಪ್ರತಿದಿನ ನೀಡಬಹುದಾದ ತಿಂಡಿ ಊಟಗಳ ಮೆನು ಚಾರ್ಟ್.

## ಕರಾವಳಿ ಜಿಲ್ಲೆಗಳಿಗೆ

| ದಿನಗಳು | ಬೆಳಗ್ಗೆ ತಿಂಡಿ 8.30ಕ್ಕೆ | ಮಧ್ಯಾಹ್ನ 1.30ಕ್ಕೆ | ಸಂಜೆ 5.00 ಕ್ಕೆ | ರಾತ್ರಿ 8.30 ಕ್ಕೆ |
|---|---|---|---|---|
| ಸೋಮವಾರ | ಅಕ್ಕಿ ಗಂಜಿ ಚಟ್ನಿ/ಪಲ್ಯ ಮತ್ತು ಚಹಾ/ ಕಾಫಿ | ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಬಿಸ್ಕತ್, ಹಾಲು/ ಚಹಾ/ ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು -1. |
| ಮಂಗಳವಾರ | ಇಡ್ಲಿ ಸಾಂಬಾರು/ಚಟ್ನಿ ಮತ್ತು ಚಹಾ ಅಥವಾ ಕಾಫಿ | ಅನ್ನ, ತೊಗರಿಬೇಳೆ ಮತ್ತು ತರಕಾರಿ ಸಾಂಬಾರು ಮತ್ತು ಮಜ್ಜಿಗೆ. | ಚೌಚೌ ಬಾತ್, ಹಾಲು/ಚಹಾ/ಕಾಫಿ | ಮಾಂಸಹಾರಿಗಳಗೆ: ಚಪಾತಿ, ಅನ್ನ, ಮೀನುಸಾರು.<br>ಸಸ್ಯಹಾರಿಗಳಗೆ: ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಸಿಹಿ ಊಟ, ಮಜ್ಜಿಗೆ. |
| ಬುಧವಾರ | ದೋಸೆ, ಚಟ್ನಿ, ಆಲೂಗಡ್ಡೆ ಪಲ್ಯ, ಚಹಾ/ಕಾಫಿ | ಅನ್ನ, ಬೇಳೆ/ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು ಮತ್ತು ಮಜ್ಜಿಗೆ | ಕಡ್ಲೆಕಾಳು ಉಸುಲಿ, ಚಿತ್ರಾನ್ನ, ಹಾಲು/ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು ಮಿಶ್ರಿತ ತರಕಾರಿ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು-1, ಬೇಯಿಸಿದ ಮೊಟ್ಟೆ - 1 |
| ಗುರುವಾರ | ರವೆ ಉಪ್ಪಿಟ್ಟು, ಚಹಾ/ಕಾಫಿ | ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಮಂಡಕ್ಕಿ, ಹಾಲು/ಚಹಾ/ಕಾಫಿ | ಮಾಂಸಹಾರಿಗಳಗೆ: ಚಪಾತಿ, ಅನ್ನ, ಮೀನುಸಾರು.<br>ಸಸ್ಯಹಾರಿಗಳಗೆ: ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಸಿಹಿ ಊಟ, ಮಜ್ಜಿಗೆ. |
| ಶುಕ್ರವಾರ | ಚಿತ್ರಾನ್ನ, ಚಹಾ/ಕಾಫಿ | ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಹೆಸರು ಕಾಳು ಉಸುಲಿ, ಉಪ್ಪಿಟ್ಟು/ ಹಾಲು/ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು-1. |
| ಶನಿವಾರ | ಅಕ್ಕಿ ಗಂಜಿ ಚಟ್ನಿ/ಪಲ್ಯ ಮತ್ತು ಚಹಾ/ ಕಾಫಿ | ಅನ್ನ, ತೊಗರಿಬೇಳೆ ಮತ್ತು ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು. | ಖಾರಾ ಪುರಿ, ಹಾಲು/ಚಹಾ/ಕಾಫಿ | ಅನ್ನ, ಬೇಳೆ, ಮೊಳಕೆಕಾಳು ಮಿಶ್ರಿತ ತರಕಾರಿ ಸಾಂಬಾರು, ಬೇಯಿಸಿದ ಮೊಟ್ಟೆ - 1 |
| ಭಾನುವಾರ | ಅವಲಕ್ಕಿ ಚಹಾ/ಕಾಫಿ | ಮಾಂಸಹಾರಿಗಳಗೆ: ಚಪಾತಿ, ಅನ್ನ, ಮೀನುಸಾರು/ ಮಾಂಸ/ ಕೋಳಿ ಸಾರು,<br>ಸಸ್ಯಹಾರಿಗಳಗೆ: ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು/ ಸಿಹಿ ಊಟ, ಮಜ್ಜಿಗೆ, ಎಲ್ಲರಿಗೂ ಬಾಳೆಹಣ್ಣು | ಬಜ್ಜಿ/ಪಕೋಡ, ಹಾಲು/ಚಹಾ/ಕಾಫಿ | ಅನ್ನ, ತೊಗರಿಬೇಳೆ, ತರಕಾರಿ ಮಿಶ್ರಿತ ಸಾಂಬಾರು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾವ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ

ಅನುಬಂಧ-3

ದಕ್ಷಿಣಕರ್ನಾಟಕ ಪ್ರದೇಶದಲ್ಲಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ನಿಲಯಗಳಲ್ಲಿ ಊಟದ ದರ ಹೆಚ್ಚಳದಿಂದ ಪ್ರತಿ ದಿನ ನೀಡಬಹುದಾದ ತಿಂಡಿ ಊಟಗಳ ಮೆನು ಚಾರ್ಟ್.

## ಮಲೆನಾಡು ಮತ್ತು ದಕ್ಷಿಣಕರ್ನಾಟಕ ಜಿಲ್ಲೆಗಳಿಗೆ

| ದಿನಗಳು | ಬೆಳಗ್ಗೆ ತಿಂಡಿ 8.30ಕ್ಕೆ | ಮಧ್ಯಾಹ್ನ 1.30ಕ್ಕೆ | ಸಂಜೆ 5.00 ಕ್ಕೆ | ರಾತ್ರಿ 8.30 ಕ್ಕೆ |
|---|---|---|---|---|
| ಸೋಮವಾರ | ಟೋಮೋಟಾ ಬಾತ್, ಚಹಾ/ಕಾಫಿ | ರಾಗಿ ಮುದ್ದೆ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಬಿಸ್ಕತ್, ಹಾಲು/ ಚಹಾ/ ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು -1 |
| ಮಂಗಳವಾರ | ಇಡ್ಲಿ ಸಾಂಬಾರು/ಚಟ್ನಿ ಮತ್ತು ಚಹಾ ಅಥವಾ ಕಾಫಿ | ರಾಗಿ ಮುದ್ದೆ, ಅನ್ನ, ತೊಗರಿಬೇಳೆ ಮತ್ತು ತರಕಾರಿ ಸಾಂಬಾರು ಮತ್ತು ಮಜ್ಜಿಗೆ | ಚೌಚೌ ಬಾತ್, ಹಾಲು/ಚಹಾ/ಕಾಫಿ | ಮಾಂಸಹಾರಿಗಳಿಗೆ: ಚಪಾತಿ, ಅನ್ನ, ಮೀನುಸಾರು/ ಮಾಂಸ/ ಕೋಳಿ ಸಾರು.<br>ಸಸ್ಯಹಾರಿಗಳಿಗೆ: ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಸಿಹಿ ಊಟ, ಮಜ್ಜಿಗೆ |
| ಬುಧವಾರ | ದೋಸೆ, ಚಟ್ನಿ/ ಆಲೂಗೆಡ್ಡೆ ಪಲ್ಯ, ಚಹಾ/ಕಾಫಿ | ರಾಗಿ ಮುದ್ದೆ, ಅನ್ನ, ಬೇಳೆ/ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು ಮತ್ತು ಮಜ್ಜಿಗೆ. | ಕಡ್ಲೆಕಾಳು ಉಸುಲಿ, ಹಾಲು/ ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು ಮಿಶ್ರಿತ ತರಕಾರಿ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು-1. |
| ಗುರುವಾರ | ರವೆ ಉಪ್ಪಿಟ್ಟು, ಚಹಾ/ಕಾಫಿ | ರಾಗಿ ಮುದ್ದೆ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಮಂಡಕ್ಕಿ ಒಗ್ಗರಣೆ, ಹಾಲು/ ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ, ಬೇಯಿಸಿದ ಮೊಟ್ಟೆ -1 |
| ಶುಕ್ರವಾರ | ಚಿತ್ರಾನ್ನ, ಚಹಾ/ಕಾಫಿ | ರಾಗಿ ಮುದ್ದೆ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ | ಹೆಸರುಕಾಳು ಉಸುಲಿ, ಹಾಲು /ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು-1 |
| ಶನಿವಾರ | ತರಕಾರಿ ಪಲಾವ್, ಚಹಾ/ ಕಾಫಿ | ರಾಗಿಮುದ್ದೆ, ಅನ್ನ, ತೊಗರಿಬೇಳೆ ಮತ್ತು ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು, ಮಜ್ಜಿಗೆ. | ಖಾರಾ ಪುರಿ, ಹಾಲು/ ಚಹಾ/ಕಾಫಿ | ಅನ್ನ, ಬೇಳೆ, ಮೊಳಕೆಕಾಳು ಮಿಶ್ರಿತ ತರಕಾರಿ ಸಾಂಬಾರು, ಮಜ್ಜಿಗೆ, ಬೇಯಿಸಿದ ಮೊಟ್ಟೆ - 1 |
| ಭಾನುವಾರ | ಅವಲಕ್ಕಿ ಒಗ್ಗರಣೆ, ಚಹಾ/ಕಾಫಿ | ಮಾಂಸಹಾರಿಗಳಿಗೆ: ಚಪಾತಿ, ಅನ್ನ, ಮೀನುಸಾರು/ ಮಾಂಸ/ ಕೋಳಿಸಾರು<br>ಸಸ್ಯಹಾರಿಗಳಿಗೆ: ಚಪಾತಿ, ಪಲ್ಯ, ಅನ್ನ, ತೊಗರಿಬೇಳೆ ತಿಳಿಸಾರು, ಸಿಹಿ ಊಟ ಮತ್ತು ಮಜ್ಜಿಗೆ, ಎಲ್ಲರಿಗೂ ಬಾಳೆಹಣ್ಣು | ಬಜ್ಜಿ/ಪಕೋಡ, ಹಾಲು/ ಚಹಾ/ಕಾಫಿ | ರಾಗಿಮುದ್ದೆ, ಅನ್ನ, ತೊಗರಿಬೇಳೆ, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಚಾವ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ

ಅನುಬಂಧ-4

ಉತ್ತರಕರ್ನಾಟಕ ಪ್ರದೇಶದಲ್ಲಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ನಿಲಯಗಳಲ್ಲಿ ಊಟದ ದರ ಹೆಚ್ಚಳದಿಂದ ಪ್ರತಿ ದಿನ ನೀಡಬಹುದಾದ ತಿಂಡಿ ಊಟಗಳ ಮೆನು ಚಾರ್ಟ್.

## ಉತ್ತರ ಕರ್ನಾಟಕ ಜಿಲ್ಲೆಗಳಿಗೆ

| ದಿನಗಳು | ಬೆಳಗ್ಗೆ ತಿಂಡಿ 8.30ಕ್ಕೆ | ಮಧ್ಯಾಹ್ನ 1.30ಕ್ಕೆ | ಸಂಜೆ 5.00 ಕ್ಕೆ | ರಾತ್ರಿ 8.30 ಕ್ಕೆ. |
|---|---|---|---|---|
| ಸೋಮವಾರ | ಟೊಮಾಟೊ ಬಾತ್, ಚಹಾ/ಕಾಫಿ | ಜೋಳದರೊಟ್ಟಿ, ಚಟ್ನಿ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಬಿಸ್ಕತ್, ಹಾಲು/ ಚಹಾ/ ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು -1. |
| ಮಂಗಳವಾರ | ಇಡ್ಲಿ ಸಾಂಬಾರು/ಚಟ್ನಿ ಮತ್ತು ಚಹಾ ಅಥವಾ ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ತೊಗರಿಬೇಳೆ ಮತ್ತು ತರಕಾರಿ ಸಾಂಬಾರು ಮತ್ತು ಮಜ್ಜಿಗೆ | ಚೌಚೌ ಬಾತ್, ಹಾಲು/ಚಹಾ/ ಕಾಫಿ | **ಮಾಂಸಹಾರಿಗಳಿಗೆ:** ಚಪಾತಿ, ಅನ್ನ, ಮೀನುಸಾರು/ ಮಾಂಸ/ ಕೋಳಿ ಸಾರು.<br>**ಸಸ್ಯಹಾರಿಗಳಿಗೆ:** ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಸಿಹಿ ಊಟ, ಮಜ್ಜಿಗೆ |
| ಬುಧವಾರ | ದೋಸೆ, ಚಟ್ನಿ ಆಲೂಗಡ್ಡೆ ಪಲ್ಯ, ಚಹಾ/ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ಬೇಳೆ/ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು ಮತ್ತು ಮಜ್ಜಿಗೆ. | ಕಡ್ಲೆಕಾಳು, ಉಸುಲಿ, ಹಾಲು/ ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು ಮಿಶ್ರಿತ ತರಕಾರಿ ಸಾಂಬಾರು, ಮಜ್ಜಿಗೆ, ಬೇಯಿಸಿದ ಮೊಟ್ಟೆ - 1 |
| ಗುರುವಾರ | ರವೆ ಉಪ್ಪಿಟ್ಟು, ಚಹಾ/ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಮಂಡಕ್ಕಿ, ಹಾಲು/ ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು-1 |
| ಶುಕ್ರವಾರ | ಚಿತ್ರಾನ್ನ, ಚಹಾ/ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ಮೊಳಕೆ ಕಾಳು, ತರಕಾರಿ ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ. | ಹೆಸರುಕಾಳು ಉಸುಲಿ, ಹಾಲು /ಚಹಾ/ಕಾಫಿ | ಚಪಾತಿ, ಅನ್ನ, ಬೇಳೆ/ಕಾಳು, ಸೊಪ್ಪು ಮಿಶ್ರಿತ ಸಾಂಬಾರು, ಮಜ್ಜಿಗೆ, ಬಾಳೆಹಣ್ಣು -1. |
| ಶನಿವಾರ | ತರಕಾರಿ ಪಲಾವ್, ಚಹಾ/ ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ತೊಗರಿಬೇಳೆ ಮತ್ತು ಕಾಳು ಮಿಶ್ರಿತ ಸೊಪ್ಪಿನ ಸಾಂಬಾರು, ಮಜ್ಜಿಗೆ. | ಕಾರಾ ಪುರಿ, ಹಾಲು/ ಚಹಾ/ಕಾಫಿ | ಅನ್ನ, ಬೇಳೆ, ಮೊಳಕೆಕಾಳು ಮಿಶ್ರಿತ ತರಕಾರಿ ಸಾಂಬಾರು, ಬೇಯಿಸಿದ ಮೊಟ್ಟೆ - 1, ಮಜ್ಜಿಗೆ |
| ಭಾನುವಾರ | ಅವಲಕ್ಕಿ ಒಗ್ಗರಣೆ, ಚಹಾ/ಕಾಫಿ | **ಮಾಂಸಹಾರಿಗಳಿಗೆ:** ಚಪಾತಿ, ಅನ್ನ, ಮೀನುಸಾರು/ ಮಾಂಸ/ ಕೋಳಿಸಾರು.<br>**ಸಸ್ಯಹಾರಿಗಳಿಗೆ:** ಚಪಾತಿ, ಪಲ್ಯ, ಅನ್ನ, ತೊಗರಿಬೇಳೆ ತಿಳಿಸಾರು, ಬಾಳೆಹಣ್ಣು, ಸಿಹಿ ಊಟ ಮತ್ತು ಮಜ್ಜಿಗೆ.<br>ಎಲ್ಲರಿಗೂ ಬಾಳೆಹಣ್ಣು. | ಬಜ್ಜಿ/ಪಕೋಡ, ಹಾಲು/ ಚಹಾ/ಕಾಫಿ | ಜೋಳದ ರೊಟ್ಟಿ, ಚಟ್ನಿ, ಅನ್ನ, ತೊಗರಿಬೇಳೆ, ತರಕಾರಿ ಮಿಶ್ರಿತ ಸಾಂಬಾರು, ಮಜ್ಜಿಗೆ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ -3.
ಸಮಾಜ ಕಲ್ಯಾಣ ಇಲಾಖೆ